# ಹೂಗಳ ನಗು

ಹೂಗಳು ಅಳುವುದನ್ನು ನೋಡಿರುವಿರಾ? ಹೂಗಳ ಅಳು ಕೇಳಿಸಿಕೊಂಡಿರುವಿರಾ? ಈ ಪ್ರಶ್ನೆಗೆ, 'ಹೂಗಳ ಬಾಡುವಿಕೆಯೇ ಅವುಗಳ ಅಳು' ಎಂದು ಉತ್ತರಿಸಬಹುದೇನೊ. 'ಹೂಗಳಿಗೆ ಅಳು ನಗು ಎನ್ನುವುದೇ ಭ್ರಾಂತು' ಎಂದು ಪ್ರಶ್ನೆಯನ್ನೇ ತಳ್ಳಿ ಹಾಕಬಹುದು.

ರಸಿಕರ ಪಾಲಿಗೆ ಹೂವು ಸೌಂದರ್ಯದ ಸಂಕೇತ. ಸೌಂದರ್ಯಕ್ಕೆ ನಗು ಭೂಷಣವೇ ಹೊರತು ಅಳುವಲ್ಲ. ಹಾಗಾಗಿ, ಹೂಗಳು ಅಳುವುದಿಲ್ಲ ಎಂದು ವಾದಿಸಬಹುದು. ಆದರೆ, ಹೂಗಳ ಲೋಕದ ಆಗುಹೋಗು ನಾವೇನು ಬಲ್ಲೆವು. ನಮ್ಮ ಮಾತುಗಳೆಲ್ಲ ಸೌಂದರ್ಯದ ಹಿನ್ನೆಲೆಯವೇ ಹೊರತು, ವಾಸ್ತವದ ನೆಲೆಗಟ್ಟಿನವಲ್ಲ. ವಾಸ್ತವ ಏನೇ ಇರಲಿ, ಹೂಗಳು ಅಳುವುದಿಲ್ಲ ಎಂದೇ ನಂಬೋಣ. ಹೂಗಳ ನಗುವನ್ನು ನೋಡುತ್ತ ನಮ್ಮ ಅಳಲು ಮರೆಯೋಣ.

ನಗುವಿನ ಅತ್ಯುತ್ತಮ ಅಭಿವ್ಯಕ್ತಿ ಹೂಗಳು. ಸುಂದರಿಯರ ಮುಖದಲ್ಲಿ ಹೂವನ್ನು ಕಾಣುವುದುಂಟು. ಮುಖವಷ್ಟೇ ಅಲ್ಲ, ದೇಹದ ಬೇರೆ ಬೇರೆ ಅವಯವಗಳನ್ನು ಬೇರೆ ಬೇರೆ ಹೂಗಳಿಗೆ ಹೋಲಿಸುತ್ತ, ಹೆಣ್ಣನ್ನು ಹೂವಿನಬುಟ್ಟಿಯಂತೆ ನೋಡಿರುವ ರಸಿಕಕವಿಗಳೂ ಇದ್ದಾರೆ. ಹೆಣ್ಣಿನ ಮುಡಿಗೂ ಹೂ ಬೇಕು. ಹೆಣ್ಣಿಗೂ ಹೂವಿಗೂ ಇರುವ ಈ ಸೌಂದರ್ಯ ಸಂಬಂಧ – 'ಹೆಣ್ಣೊಳು ಹೂವೊ ಹೂವೊಳು ಹೆಣ್ಣೊ' ಎನ್ನುವ ಜಿಜ್ಞಾಸೆಗೆ ಕಾರಣವಾಗಬಲ್ಲದು. ಹೆಣ್ಣು–ಹೂವು ಸಮೀಕರಣಕ್ಕೆ ನಿದರ್ಶನವಾಗಿ 'ಹೂವು ಚೆಲುವೆಲ್ಲ ನಂದೆಂದಿತು' ಎನ್ನುವ, ಆರ್.ಎನ್. ಜಯಗೋಪಾಲ್ ರಚನೆಯ 'ಹಣ್ಣೆಲೆ ಚಿಗುರಿದಾಗ' ಸಿನಿಮಾದ ಗೀತೆ ನೆನಪಿಸಿಕೊಳ್ಳಬಹುದು. ಚೆಲುವೆಲ್ಲ ತನ್ನದು ಎಂದು ಹೂವು ಹಕ್ಕು ಮಂಡಿಸಿದರೆ, 'ಹೆಣ್ಣು ಹೂವ ಮುಡಿದು ಚೆಲುವೇ ತಾನೆಂದಿತು' ಎನ್ನುವುದು ಜಯಗೋಪಾಲ್ ಕಲ್ಪನೆ. ಈ ಸೊಗಸಾದ ಕಲ್ಪನೆಯನ್ನು 'ಹೂಬಣ್ಣನೆ' ಎನ್ನೋಣವೆ?

ಹೆಣ್ಣಿಗೂ ಹೂವಿಗೂ ಇರುವ ಹೋಲಿಕೆ ಎಷ್ಟು ಸತ್ಯ ಎಷ್ಟು ಮಿಥ್ಯ ಎನ್ನುವುದು ಅವರವರ ಭಾವಕ್ಕೆ ಬಿಟ್ಟ ವಿಚಾರ. ಆದರೆ, ಹೆಣ್ಣು ನಕ್ಕಾಗ ಅವಳ ಮುಖ ಅರಳಿದ ಹೂವಿನಂತೆ ಕಾಣಿಸುವುದು ಎಲ್ಲರೂ ಒಪ್ಪಬಹುದಾದ ನಿಜ. ಮೊಗವಷ್ಟೇ ಅಲ್ಲ, ಕಣ್ಣುಗಳೂ ನಗುವವು. ಮುಖಾರವಿಂದ ಎನ್ನುವುದರ ಜೊತೆಗೆ ತಾವರೆಕಣ್ಣುಗಳನ್ನೂ ನೆನಪಿಸಿಕೊಳ್ಳಬಹುದು. ದೊಡ್ಡದೊಂದು ಹೂವಲ್ಲಿ ಹುದುಗಿಕೊಂಡು ನಗುವ ಎರಡು ಪುಟ್ಟ ಹೂಗಳು! 'ನಗುವ ನಯನ ಮಧುರ ಮೌನ' ಎನ್ನುತ್ತದೆ 'ಪಲ್ಲವಿ ಅನುಪಲ್ಲವಿ' ಸಿನಿಮಾದ ಗೀತೆ. ಕಣ್ಣುಗಳು ನಗುವುದೆಂದರೆ, ಹೂ ಅರಳುವುದೆಂದರ್ಥ. ಹೂ ಅರಳುವಾಗ ಸದ್ದುಗದ್ದಲಗಳ ತುತ್ತೂರಿಗಳಿಗೆ ಅವಕಾಶವೆಲ್ಲಿ? ಆ ಮೌನ ಮಧುರವೇ ಹೌದು.

ಮೊಗ್ಗರಳಿ ಹೂವಾಗುವುದು ನಮಗೆ ಬೆಡಗು. ಆ ಅಮೃತ ಕ್ಷಣ ಇದ್ದಕ್ಕಿದ್ದಂತೆ ಘಟಿಸುವುದಲ್ಲ. ಯಾರೋ ಮಾಯಕಾರನ ಬೆರಳುಗಳು ಸೋಕಿ ಮೊಗ್ಗಿನ ಪಕಳೆಗಳಿಗೆ ಕಚಗುಳಿಯಾಗಿ, ಆ ಪುಲಕದಲ್ಲಿ ಮೊಗ್ಗು ತನ್ನರಿವನ್ನೂ ಮೀರಿ ಹೂವಾಗಿ ವಿಕಸನಗೊಳ್ಳುವುದು. ಆ ವಿಕಾಸ ಸುಲಭವಾಗಿ ಗೋಚರಿಸದು. ಆದರೆ, ಮುಖದಲ್ಲಿ ನಗುವರಳುವುದು ಕಾಣುವುದು.

ಹೂವಿಲಾಸವನ್ನು ಅರಿಯಲು ಜಿ.ಎಸ್. ಶಿವರುದ್ರಪ್ಪನವರು ಮಲ್ಲಿಗೆಯ ಬಗ್ಗೆ ಬರೆದಿರುವ ಕವಿತೆಯನ್ನು ಗಮನಿಸಬೇಕು. 'ನೋಡು ಇದೊ ಇಲ್ಲರಳಿ ನಗುತಿದೆ / ಏಳು ಸುತ್ತಿನ ಮಲ್ಲಿಗೆ / ಇಷ್ಟು ಹಚ್ಚನೆ ಹಸುರ ಗಿಡದಿಂ– / ದೆಂತು ಮೂಡಿತೊ ಬೆಳ್ಳಗೆ!' ಎನ್ನುವ ಅಚ್ಚರಿಯೊಂದಿಗೆ ಕವಿತೆ ಆರಂಭವಾಗುತ್ತದೆ. ಮಲ್ಲಿಗೆ ಹಂಬಿನ ಎಲೆಗಳು ಕಡುಹಸುರು. ಹಸುರು ಒಡಲಲ್ಲಿ ಮಲ್ಲಿಗೆಯೆನ್ನುವ ಬಿಳುಪಿನ ಕವಿತೆ! ಬಳ್ಳಿಯಲ್ಲಿ ಅರಳುವ ಮಲ್ಲಿಗೆ ಕವಿತೆ ಪ್ರಕೃತಿ ವ್ಯಾಪಾರದ ಭಾಗವಾಗಿ ಕವಿಗೆ ಕಾಣಿಸಿದೆ. 'ಮೇಲೆ ನಭದಲಿ ನೂರು ತಾರೆಗ– / ಳರಳಿ ಮಿರುಗುವ ಮುನ್ನವೆ / ಬೆಳ್ಳಿಯೊಂದೇ ಬೆಳಗುವಂದದಿ– / ಗಿಡದೊಳೊಂದೇ ಹೂವಿದೆ'. ನಭದ ಬಳ್ಳಿಯಲ್ಲಿ ಚಂದಿರನೇ ಒಂಟಿ ಮಲ್ಲಿಗೆ!

ಜಿಎಸ್‌ಎಸ್ ಅವರ ಮಲ್ಲಿಗೆ ಆಖ್ಯಾನ ಮತ್ತಷ್ಟು ಎತ್ತರಕ್ಕೆ ಜಿಗಿದು ಧ್ಯಾನದ ಬಿತ್ತರಕ್ಕೆ ತಲಪುತ್ತದೆ. ಹೂವರಳುವುದು ದೈನಿಕದ ಸಹಜ ಕ್ರಿಯೆಯಲ್ಲ. ಅರಳಿರುವ ಹೂವು ಕವಿಗೆ, 'ಸತ್ವಶೀಲನ ಧ್ಯಾನಮೌನವೆ ಅರಳಿ ಬಂದೊಲು ತೋರಿದೆ!', 'ಒಲವು ತುಂಬಿದ ಮುಗುದೆಯೆದೆಯಿಂ– / ದೊಗೆದ ನಲ್ನುಡಿಯಂತಿದೆ.' ನಲ್ನುಡಿ ಎನ್ನುವ ಮೂಲಕ ಹೂವಿಗೆ ಭಾಷೆಯ ಆವರಣವೊಂದನ್ನು ಕವಿ ಕಲ್ಪಿಸಿದ್ದಾರೆ. ಎಂಥ ಚಂದದ ಕಲ್ಪನೆ.

ನಗುವಿನ ಕುರಿತ ಮಾತುಗಳು ಅಳುವಿನ ಪ್ರಸ್ತಾಪವಿಲ್ಲದೆ ಪೂರ್ಣಗೊಳ್ಳವು. ಎಷ್ಟೇ ಆಗಲಿ, ನಗುವಿಗೆ ಅಳುವೇ ತಾಯಿ. 'ಅಳುವ ಕಡಲೊಳು ತೇಲಿ ಬರುತಲಿದೆ ನಗೆಯ ಹಾಯಿದೋಣಿ' (ಗೋಪಾಲಕೃಷ್ಣ ಅಡಿಗ). ತಿಳಿದವರು 'ಅಳು ಒಂದು ಭಾಷೆ' ಎನ್ನುವರು. ಹಾಗಾದರೆ, ನಗು? ಪರಿಮಿತ ಸಾಧ್ಯತೆಗಳ ಅಳುವನ್ನು ಭಾಷೆಯ ರೂಪದಲ್ಲಿ ನೋಡುವುದಾದರೆ, ಅಪರಿಮಿತ ಸಾಧ್ಯತೆಗಳ ನಗುವನ್ನು ಬಹು ಭಾಷೆಗಳ ಸಂಕಲನ ಎಂದೇ ಹೇಳಬೇಕು. ನಗುವಿನ ಬಗೆಗಳು ಒಂದೆರಡಲ್ಲ. ಕಿರುನಗೆ, ಹುಳಿನಗೆ, ಬಿರುನಗೆ, ವಕ್ರನಗೆ, ಹೂನಗೆ – ಹೀಗೆ ನಗುವಿನ ವಿನ್ಯಾಸಕ್ಕೆ ಹಲವು ಭಾವ–ಬಣ್ಣ–ಬೆಡಗು.

ಅಳು ಮತ್ತು ನಗುವಿನದು ಕಳ್ಳುಬಳ್ಳಿ ನಂಟಾದರೂ, ಪರಿಣಾಮದಲ್ಲಿ ಅಳುವಿಗೆ ನಗು ಸಾಟಿಯಲ್ಲ. ಮನಸ್ಸಿನ ಮೇಲೆ ಅಳುವಿನ ಪರಿಣಾಮ ದೀರ್ಘ. ನಗುವಿನ ಆಯುಸ್ಸು ಕ್ಷಣಿಕ. ಅಳುವಿಗೆ ಮೂಲವಾದ ದುಃಖ ನಿರಂತರವಾದುದು, ನಾವು ಬಯಸದೆಯೂ ಮಾಯದ ಗಾಯವಾಗಿ ಉಳಿಯುವಂತಹದ್ದು. ನಗುವಿನ ಸಮಾಚಾರ ಭಿನ್ನ. ನಗುವಷ್ಟು ಹೊತ್ತೂ ಉಲ್ಲಾಸ. ಹೂವಿನ ಆಯುಸ್ಸಾದರೂ ಎಷ್ಟು? ಕೆಲವು ತಾಸು, ಒಂದು ದಿನ, ಒಂದೆರಡು ದಿನ. ಹೂರೂಪಿಯಾದ ನಗುವಿನ ಆಯುಸ್ಸು ಮತ್ತೂ ಕಡಿಮೆ; ಅದು ಕ್ಷಣಗಳ ಲೆಕ್ಕದ್ದು.

ಲೋಕಕ್ಕೆ ಹೂಗಳ ನಗುವಷ್ಟೇ ಗೊತ್ತು. ಎಲೆಮರೆಯ ಹಣ್ಣಿನಂತಹದ್ದು ನಗುಮರೆಯ ಅಳಲು. ಹೂಗಳ ಬದುಕು ಒಂದು ಸುದೀರ್ಘ ಮಂದಹಾಸ. ನಗು ಕೊನೆಗೊಳ್ಳುವುದೆಂದರೆ ಹೂವು ಬಾಡುವುದೆಂದರ್ಥ, ಮಣ್ಣು ಸೇರುವುದೆಂದರ್ಥ. ನಮ್ಮ ಬದುಕೂ ಹೀಗೆ ಉದ್ದಕ್ಕೂ ನಗೆ ತುಂಬಿಕೊಂಡಿರಬೇಕಲ್ಲವೆ? ಹೂಗಳಿಂದ ನಾವು ಕಲಿಯಬೇಕಾದ ಪಾಠ ಅದರ ನಗುವೇ ಇರಬೇಕು. 'ಅಳು'ವಿಗೂ 'ಅರಳು'ವಿಕೆಗೂ ಅಕ್ಷರವಷ್ಟೇ ವ್ಯತ್ಯಾಸ.

■ **ಚಂಪಕಮಾಲಾ**

## ಮಾತೇ ಮುತ್ತು

- ಸತ್ಯಕ್ಕೆ ಸರ್ವವನ್ನೂ ಸಮರ್ಪಿಸಬಹುದು. ಆದರೆ ಸತ್ಯವನ್ನು ಮತ್ತಾವುದಕ್ಕೂ ತೆರುವುದಕ್ಕೆ ಆಗುವುದಿಲ್ಲ.

  —ಸ್ವಾಮಿ ವಿವೇಕಾನಂದ

- ದುರ್ಬಲವಾಗಿರುವವರು ಎಂದಿಗೂ ಕ್ಷಮಿಸಲಾರರು. ಕ್ಷಮೆ ಎಂಬುದು ಶಕ್ತಿವಂತರ ಗುಣಲಕ್ಷಣ.

  —ಮಹಾತ್ಮ ಗಾಂಧಿ

- ಚುಚ್ಚುವುದು ಸೂಜಿಯ ಗುಣವಾದರೂ ದಾರದ ಗೆಳೆತನ ಮಾಡಿದ ಮೇಲೆ ಸೂಜಿಯ ಗುಣ ಬದಲಾಗಿ ಎಲ್ಲವನ್ನೂ ಜೋಡಿಸಲು ಮುಂದಾಗುತ್ತದೆ.

  —ಸಿದ್ಧೇಶ್ವರ ಸ್ವಾಮೀಜಿ

- ಇದ್ದಷ್ಟು ದಿನವಾರೆ ಇರುವಷ್ಟು ಪ್ರೀತಿಯ ಇನ್ನಷ್ಟು ರುಚಿಮಾಡಿ ತೆರಳುವುದು.

  —ದ.ರಾ. ಬೇಂದ್ರೆ

- ಅಜ್ಞಾನ ನಿಮ್ಮಲ್ಲಿ ಭಯವನ್ನುಂಟು ಮಾಡಿದರೆ, ಭಯ ನಿಮ್ಮಲ್ಲಿ ಅಜ್ಞಾನವನ್ನುಂಟು ಮಾಡುತ್ತದೆ. ಈ ಎರಡನ್ನು ಓಡಿಸುವ ಏಕೈಕ ಅಸ್ತ್ರ ವಿದ್ಯೆ.

  —ಅಂಬೇಡ್ಕರ್

- ಹಿಂದೂ ಮುಸ್ಲಿಮನೇ ಆಗು, ಬೌದ್ಧ ಕ್ರೈಸ್ತನೇ ಆಗು, ಏನಾದರೂ ಆಗು ಮೊದಲು ಮಾನವನಾಗು.

  —ಕುವೆಂಪು

- ಕನ್ನಡಿಯು ನನ್ನ ಉತ್ತಮ ಸ್ನೇಹಿತ. ಏಕೆಂದರೆ ನಾನು ಅಳುವಾಗ ಅದು ಎಂದಿಗೂ ನಗುವುದಿಲ್ಲ.

  —ಚಾರ್ಲಿ ಚಾಪ್ಲಿನ್